

ಸುಮಾರು 70–75 ವಯಸ್ಸಿನ ಡಾಕ್ಟರಮ್ಮ ನನಗೆ ತುಂಬಾ ಪರಿಚಿತರೇನಲ್ಲ. ಅವರ ಪಾಲಿಗೆ ಉಳಿದ ಲಕ್ಷಾಂತರ ರೋಗಿಗಳಂತೆ ನಾನೂ ಒಬ್ಬ. ಲಕ್ಷಾಂತರ ರೋಗಿಗಳೆನ್ನಲೂ ಕಾರಣವಿದೆ. ಅವರು ಇದ್ದದ್ದು ಒಂದು ಸಾಮಾನ್ಯ ಊರಲ್ಲಾದರೂ ಸುಮಾರು 40–45 ವರ್ಷಗಳಿಂದ ಮಕ್ಕಳ ತಜ್ಞೆಯಾಗಿ ಎಲ್ಲರಿಗೂ ಚಿರಪರಿಚಿತ. ಸುತ್ತಮುತ್ತಲಿನ ನಾಲ್ಕಾರು ಜಿಲ್ಲೆಗಳಲ್ಲಿ ಅವರ ಕೈಗುಣದ್ದೇ ಮಾತು. ಯಾವ ಔಷಧಿಯೂ ನಾಟದಿದ್ದರೆ, ಡಾಕ್ಟರಮ್ಮನ ಚಿಕಿತ್ಸೆಗೆ ಬಗ್ಗದ ಕಾಯಿಲೆ ಇಲ್ಲ ಎಂಬ ಮಾತು ಜನಜನಿತವಾಗಿತ್ತು. ಆಕೆ ಬಹುತೇಕ ಸಂದರ್ಭಗಳಲ್ಲಿ ರೋಗಿಗಳಿಂದ ಫೀಸ್ ತೆಗೆದುಕೊಳ್ಳುತ್ತಿರಲಿಲ್ಲ. ತೆಗೆದುಕೊಂಡರೂ ಅದು 10–20 ರೂಪಾಯಿಗಳಷ್ಟೇ. ಹೀಗಾಗಿ ಅವರ ಕ್ಲಿನಿಕ್‌ನಲ್ಲಿ ಸದಾ ಜನಜಂಗುಳಿ.

ಡಾಕ್ಟರಮ್ಮನ ಬಗ್ಗೆ ಓರಗೆಯಲ್ಲಿ ಯಾರಿಗೂ ಹೆಚ್ಚಿನ ಮಾಹಿತಿ ಇದ್ದಂತಿರಲಿಲ್ಲ. ಅವರ ಹತ್ತಿರದ ಪರಿಚಯವಿದ್ದ ಹಿರೀಕರ ಪ್ರಕಾರ, ಡಾಕ್ಟರಮ್ಮನ ಅಪ್ಪ ವಕೀಲರಾಗಿದ್ದರು. ಅಮ್ಮ ಮುಂಬಯಿನವರು. ಅವರ ಕುಟುಂಬ ಮೂಲತಃ ಆಗರ್ಭ ಶ್ರೀಮಂತ. ಅವರ ಏಕೈಕ ಸಂತಾನ ಈ ಡಾಕ್ಟರಮ್ಮ. ಚಿಕ್ಕ ವಯಸ್ಸಿನಲ್ಲೇ ಮುಂಬಯಿಗೆ ಶಿಕ್ಷಣಕ್ಕೆಂದು ತೆರಳಿದ್ದರು. ಅಲ್ಲಿಗೆ ಹೋದವರು ಊರಿಗೆ ಬರುತ್ತಿದ್ದುದೇ ಅಪರೂಪ. ಹೆತ್ತವರೇ ಅಲ್ಲಿಗೆ ಹೋಗಿ ಮಗಳನ್ನು ನೋಡಿಕೊಂಡು ಬರುತ್ತಿದ್ದಂತೆ ಕಾಣುತ್ತಿತ್ತು.

ಡಾಕ್ಟರಮ್ಮ ಊರಿಗೆ ಮರಳಿದ್ದು ಶಿಶು ತಜ್ಞೆಯಾಗಿ. ಅಪ್ಪ ತೀರಿಕೊಂಡ ಸಂದರ್ಭವಿರಬೇಕು. ಆಗ ಊರಿಗೆ ಹಿಂತಿರುಗಿದ ಡಾಕ್ಟರಮ್ಮ ಮತ್ತೆ ಮುಂಬಯಿಗೆ ತೆರಳಲಿಲ್ಲ. ಇಲ್ಲೇ ದಶಕಗಳಿಂದ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ತೀರಾ ಶಿಸ್ತಿನ ಸಿಪಾಯಿಯಂತೆ ಕಾಣುತ್ತಿದ್ದ ಅವರು ಯಾರಲ್ಲೂ ಅಗತ್ಯಕ್ಕಿಂತ ಒಂದು ಹೆಚ್ಚು ಶಬ್ದ ಕೂಡಾ ಮಾತನಾಡುತ್ತಿರಲಿಲ್ಲ. ಹೀಗಾಗಿ ಯಾರೂ ಕೂಡಾ ಅವರ ಬದುಕಿನ ಬಗ್ಗೆ ಕೇಳುವ ಚಾನ್ಸೇ ಇರಲಿಲ್ಲ. ಅವರ ಶಿಕ್ಷಣ, ಮದುವೆ, ಸಂಸಾರ ಹೀಗೆ ಎಲ್ಲವೂ ಒಂದು ರೀತಿಯಲ್ಲಿ ನಿಗೂಢವಾಗಿತ್ತು. ಮನೆಯಲ್ಲಿ ಕೂಡಾ ಅವರೊಬ್ಬರೇ. ಹೆಣ್ಣು ಜೀವ ಎನ್ನುವ ಕಾರಣಕ್ಕೋ ಏನೋ, ಈ ನಿಗೂಢತೆಯಲ್ಲೇ ಎಲ್ಲರಿಗೂ ಹೆಚ್ಚಿನ ಆಸಕ್ತಿ ಇದ್ದಂತಿತ್ತು.

ಆದರೆ ನನಗೆ ಅವರ ಬಗ್ಗೆ ಹೆಚ್ಚಿನ ಕುತೂಹಲ ಉಂಟು ಮಾಡುವಂತೆ ಮಾಡಿದ್ದು ಅವರ ಮನೆಯ ಸೆಕ್ಯೂರಿಟಿ ಗಾರ್ಡ್ ನಾಗಪ್ಪ. ನಾಗಪ್ಪ ನನ್ನ ತಂದೆಯ ವಯಸ್ಸಿನವರಿರಬಹುದು. ಅವರ ಮನೆ ಇದ್ದದ್ದು ನಮ್ಮ ಮನೆಯ ಅಂಚಿನಲ್ಲೇ. ಹೀಗಾಗಿ, ಚಿಕ್ಕಂದಿನಿಂದಲೇ ಪರಿಚಯ. ಡಾಕ್ಟರಮ್ಮನ ಬಳಿಗೆ ಹೋದಾಗ, ಸರತಿ ತಪ್ಪಿಸಿ ಅವರನ್ನು ಭೇಟಿಯಾಗಲು ನಾಗಪ್ಪನ ಸಹಾಯ ಬೇಕಿತ್ತು. ಹಾಗಾಗಿ ಅವರಿಗೆ ರಾಜ ಮರ್ಯಾದೆ. ಆದರೆ ವೈಯಕ್ತಿಕವಾಗಿ ನನಗೆ ನಾಗಪ್ಪ ಹೆಚ್ಚು ಇಷ್ಟವಾದದ್ದು ಆತ ಇತರ ಮನೆಗಳ ಬಗ್ಗೆ ಹೇಳುತ್ತಿದ್ದ ಕಥೆಗಳಿಂದ. ಒಂದು ರೀತಿಯಲ್ಲಿ ಆತ ಕಥಾ ಕಣಜವಿದ್ದಂತೆ. ಆತ ಹೇಳುತ್ತಿದ್ದ ಕಥೆಗಳಲ್ಲಿ ಎಷ್ಟು ಸತ್ಯ ಎಷ್ಟು ಸುಳ್ಳು ಎನ್ನುವುದು ಅವನಿಗೆ ಮಾತ್ರ ಗೊತ್ತು. ಆತ ಆ ಎಲ್ಲಾ ಕಥೆಗಳನ್ನು ಎಲ್ಲಿಂದ ಸಂಗ್ರಹಿಸುತ್ತಿದ್ದ ಕೂಡಾ ನನಗೆ ಗೊತ್ತಿರಲಿಲ್ಲ. ಬಹುಶಃ ಕ್ಲಿನಿಕ್‌ಗೆ ಬಂದ ರೋಗಿಗಳನ್ನು ಮಾತಿಗೆಳೆದು, ಒಂದಷ್ಟು ವಿವರ ಬಗೆದು, ತಾನೇ ಒಂದು ಕಥೆ ಕಟ್ಟುತ್ತಿದ್ದನೋ ಏನೋ! ಈತ ಡಾಕ್ಟರಮ್ಮನ ಬಗ್ಗೆ ಆಗಾಗ್ಗೆ ಏನಾದರೊಂದು ಕಥೆ ಹೇಳುತ್ತಿದ್ದ; ಡಾಕ್ಟರಮ್ಮನ ಶಿಸ್ತು, ರೋಗಿಗಳಿಗೆ ಅವರ ಬೈಯ್ಗುಳ ಇತ್ಯಾದಿಗಳ ಮೇಲೆ ಈ ಕಥೆಗಳಿರುತ್ತಿದ್ದವು. ಬಾಯ್ತಪ್ಪಿ ಕೂಡಾ ಆತ ಡಾಕ್ಟರಮ್ಮನ ವೈಯಕ್ತಿಕ ವಿಷಯಗಳ ಬಗ್ಗೆ ಮಾತನಾಡಿದ್ದನ್ನು ನಾನು ಕೇಳಿರಲಿಲ್ಲ.

ನನಗೆ ಡಾಕ್ಟರಮ್ಮನ ಸಂಪರ್ಕ ಸಿಕ್ಕಿದ್ದು ಈ ನಾಗಪ್ಪನ ಕಾರಣದಿಂದ. ಸುಮಾರು ಒಂದೂವರೆ ವರ್ಷಗಳ ಹಿಂದಿನ ಕಥೆ. ನನ್ನ ವಕೀಲ ವೃತ್ತಿಯ ಆರಂಭದ ದಿನಗಳು. ಒಂದು ದಿನ ರಾತ್ರಿ ನಾಗಪ್ಪ ನನ್ನನ್ನು ಹುಡುಕಿಕೊಂಡು ಬಂದಿದ್ದರು. ಡಾಕ್ಟರಮ್ಮ ಆಸ್ತಿಗೆ ವಿಲ್ ಬರೆಯಲು ವಕೀಲರೊಬ್ಬರನ್ನು ಕರೆ ತರುವಂತೆ ಸೂಚಿಸಿದ್ದರು. ರಾತ್ರಿ ಏಕೆ? ಮರು ದಿನ ಬೆಳಗ್ಗೆ ಹೋಗೋಣ ಎಂದೆ. ಇಲ್ಲ ಈಗಲೇ ಬರಬೇಕಂತೆ ಎಂದು ಒತ್ತಾಯದಿಂದ ಎಳೆದುಕೊಂಡಂತೆ ಹೋದ.

ಡಾಕ್ಟರಮ್ಮನ ಮನೆ ಬಂಗಲೆಯಂತಿತ್ತು. ಎರಡು ಅಂತಸ್ತುಗಳ ಹಳೆ ಮನೆ. ನಾಗಪ್ಪನನ್ನು ಡಾಕ್ಟರಮ್ಮ ನಿರೀಕ್ಷಿಸಿದಂತಿತ್ತು. ಹಾಗಾಗಿ ಮನೆಯ ಬಾಗಿಲು ಹಾಕಿರಲಿಲ್ಲ. ಒಳಕ್ಕೆ ಹೋದಾಗ ಡಾಕ್ಟರಮ್ಮ ಯಾರ ಬಳಿಯೋ ಫೋನ್‌ನಲ್ಲಿ ಮಾತನಾಡುತ್ತಿದ್ದರು. ನಾವು ಒಳಗೆ ಹೋಗುತ್ತಿದ್ದಂತೆ ಡಾಕ್ಟರಮ್ಮ ಮಾತು ನಿಲ್ಲಿಸಿದರು.

ಇಷ್ಟು ದೊಡ್ಡ ಬಂಗಲೆಯಲ್ಲಿ ಡಾಕ್ಟರಮ್ಮ ಒಬ್ಬರೇ ಹೇಗಿರುತ್ತಾರೆ ಎಂದು ಮನಸ್ಸಿನಲ್ಲೇ ಅಂದುಕೊಂಡೆ.

ನನ್ನನ್ನೊಮ್ಮೆ ದುರುಗುಟ್ಟಿಸಿಕೊಂಡು ನೋಡಿದರು ಡಾಕ್ಟರಮ್ಮ. ಏಕೋ ಮೈಯೆಲ್ಲಾ ಬೆವರಿದಂತಾಯಿತು. 'ವಿಲ್ ಬರೆಯುವ ಪ್ರಕ್ರಿಯೆ ಗೊತ್ತಿದೆಯೆ' ಎಂದು ಕೇಳಿದರು.

'ಗೊತ್ತಿದೆ' ಎಂದು ಹೇಳುವಷ್ಟರಲ್ಲಿ ನನ್ನ ಮುಂದೆ ಛಾಪಾ ಕಾಗದವಿತ್ತು. ದೂರದ ಊರಿನ ಸ್ವಾಮೀಜಿಯೊಬ್ಬರಿಗೆ ತನ್ನೆಲ್ಲಾ ಸಂಪತ್ತು ದಾನ ಮಾಡುವ ಡಾಕ್ಟರಮ್ಮನ ವಿಲ್ ಅದು.

ಸುಮಾರು ಡಾಕ್ಟರಮ್ಮನದ್ದೇ ವಯಸ್ಸಿನ ಸ್ವಾಮೀಜಿ ಆತ. ಮುಂಬಯಿಯಲ್ಲಿ ಸ್ವಲ್ಪ ಸಮಯ ಏನೇನೋ ಕೆಲಸ ಮಾಡಿ, ಪೆಟ್ಟು ತಿಂದು ಬಂದು ಈ ಕಾವಿ ವೇಷ ಹಾಕಿಕೊಂಡಿದ್ದಾನೆ ಎನ್ನುವ ಮಾತುಗಳು ಊರಿನಲ್ಲೆಲ್ಲಾ ಜನಜನಿತವಾಗಿತ್ತು. ಆದರೆ ಡಾಕ್ಟರಮ್ಮನಿಗೆ ಹೇಳುವ ಸ್ಥಿತಿಯಲ್ಲಿ ನಾನಿರಲಿಲ್ಲ. ಡಾಕ್ಟರಮ್ಮನಿಗೆ ಆತನ ಬಗ್ಗೆ ಪೂರ್ತಿ ಮಾಹಿತಿ ಇಲ್ಲದೆ ಈ ದಾನ ಮಾಡುತ್ತಿದ್ದಾರೋ ಅಥವಾ ಬೇರಾವುದೋ ಒತ್ತಡ, ಕಾರಣವಿದೆಯೋ ಎಂದು ನನಗೆ ಅರ್ಥವಾಗಲಿಲ್ಲ.

ರಾತ್ರಿ ಹೊತ್ತು, ಅಷ್ಟು ಗಡಿಬಿಡಿಯಿಂದ ಮಾಡಿ ಮುಗಿಸುವ ಕೆಲಸ ಅದಾಗಿರಲಿಲ್ಲ. ಆದರೆ